**ದಿನಾಂಕಃ 18/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿತ ಪರ ವಕೀಲರಿಂದಃ**

8. ಹೊನ್ನಾಪುರದಲ್ಲಿರುವ ಅಂಚೆ ಕಚೇರಿಯು ಶಾಖಾ ಅಂಚೆ ಕಚೇರಿಯಾಗಿದೆ. ಆರೋಪಿತ ಕೆಲಸ ಮಾಡುವ ಸಮಯದಲ್ಲಿ ಎಂ ಐ ಎಸ್ ಹಿರಿಯ ನಾಗರೀಕರ ಖಾತೆ ತೆರೆಯುವಂತಿರಲಿಲ್ಲ. ಸದರಿ ಕಚೇರಿಯ ಖಾತೆ ನಂ. 926698 ತಿಮ್ಮಮ್ಮ ಕೋಂ ಲೇಟ್ ಸಣ್ಣೇಗೌಡರಿಗೆ ಸೇರಿದ್ದು. ತಿಮ್ಮಮ್ಮ ರವರು ಯಾವ ತಾರೀಖು, ತಿಂಗಳು ಮತ್ತು ಇಸವಿಯಂದು ಖಾತೆ ತೆರೆದಿದ್ದರು ಎಂದು ಗೊತ್ತಿಲ್ಲ. ಅವರು ಎಷ್ಟು ವರುಷಗಳ ಹಿಂದೆ ಖಾತೆ ತೆರೆದಿದ್ದರು ಎಂದು ದಾಖಲೆ ನೋಡಿ ಹೇಳಬೇಕು. ಹೊನ್ನಾಪುರದ ಪುಟ್ಟಶೆಟ್ಟ ಬಿನ್ ವೀರಶೆಟ್ಟರವರು ಉಳಿತಾಯ ಖಾತೆಯನ್ನು ಸದರಿ ಅಂಚೆ ಕಚೇರಿಯಲ್ಲಿ ತೆರೆದಿದ್ದರು. ಅವರು ಯಾವ ದಿನಾಂಕ, ತಿಂಗಳು ಮತ್ತು ಇಸವಿಯಂದು ಖಾತೆ ತೆರೆದಿದ್ದರು ಎಂದು ಗೊತ್ತಿಲ್ಲ. ಮಹದೇವಮ್ಮ ರವರೂ ಸಹ ಖಾತೆ ಹೊಂದಿದ್ದರು, ಆದರೆ ಯಾವ ದಿನಾಂಕ, ತಿಂಗಳು ಮತ್ತು ಇಸವಿಯಂದು ಖಾತೆ ತೆರೆದಿದ್ದರು ಎಂದು ಗೊತ್ತಿಲ್ಲ.

9. ನಮ್ಮ ಶಾಖೆಯ ನಿಯಮದ ಪ್ರಕಾರ ಒಬ್ಬರು ಖಾತೆ ತೆರೆದರೆ ಖಾತೆಯ ಪಾಸ್ ಬುಕ್ ಅವರಿಗೆ ನೀಡಬೇಕು, ಅದನ್ನು ಅಂಚೆ ಕಚೇರಿಯಲ್ಲಿ ಇಟ್ಟು ಕೊಳ್ಳಬಾರದು ಎಂದರೆ ಸರಿ. ಸತೀಶ್ ರವರ ಖಾತೆಯನ್ನು ದಿಃ 12.09.2016 ರಂದು, ಶ್ರೀನಿವಾಸ ರವರ ಖಾತೆಯನ್ನು ದಿಃ 19.06.2017 ರಂದು ದುರುಪಯೋಗ ಪಡಿಸಿಕೊಳ್ಳಲಾಗಿದೆ ಎಂದು ಗೊತ್ತಾಯಿತು. ಸತೀಶ, ಶ್ರೀನಿವಾಸ ಮತ್ತು ಸರೋಜಮ್ಮ ರವರು ಅವರ ಖಾತೆಯ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ಲಿಖಿತ ದೂರು ಸಲ್ಲಿಸಿದ್ದಾರ ಎಂದರೆ ಶ್ರೀನಿವಾಸ ರವರು ಲಿಖಿತ ಮತ್ತು ಮೌಖಿಕ ದೂರನ್ನು ನೀಡಿದ್ದಾರೆ, ಇತರರು ಮೌಖಿಕವಾಗಿ ಹೇಳಿಕೆಯನ್ನು ನೀಡಿದ್ದಾರೆ. ದಿಃ 04.10.2018 ರಂದು ಶ್ರೀನಿವಾಸ ರವರು ಲಿಖಿತ ದೂರನ್ನು ನೀಡಿದ್ದಾರೆ. ಸರೋಜಮ್ಮ ರವರು ಐಪಿ ಹಾಸನ ರವರಿಗೆ ಮೌಖಿತ ಹೇಳಿಕೆ ನೀಡಿದ್ದರು, ಅವರು ನನಗೆ ಹೇಳಿಕೆ ನೀಡಿಲ್ಲ. ದಿಃ 04.10.2018

ರಂದು ಸತೀಶ ರವರು ನನ್ನ ಮುಂದೆ ಲಿಖಿತ ಹೇಳಿಕೆಯನ್ನು ನೀಡಿದ್ದಾರೆ. ಸತೀಶ, ಶ್ರೀನಿವಾಸ ಮತ್ತು ಸರೋಜಮ್ಮ ರವರ ಖಾತೆಯ ಹಣವು ಬೇರೆ ಬೇರೆ ದಿನಾಂಕಗಳಲ್ಲಿ ದುರುಪಯೋಗ ಆಗಿದೆ. ಸತೀಶ ರವರ ಖಾತೆಯ ಹಣವು ದಿಃ 12.09.2016, ಶ್ರೀನಿವಾಸ ರವರ ಖಾತೆಯ ಹಣವು ದಿಃ 19.06.2017 ರಂದು ಮತ್ತು ಸರೋಜಮ್ಮ ರವರ ಖಾತೆಯ ಹಣವು ದಿಃ 11.08.2017 ರಂದು ದುರುಪಯೋಗ ಆಗಿದೆ. ಸತೀಶ ರವರ ಖಾತೆಯ ಹಣವು ದುರುಪಯೋಗ ಆದ ದಿನವೇ ಅವರು ದೂರು ಸಲ್ಲಿಸಿಲ್ಲ. ದಿಃ 12.09.2016 ರಂದೇ ಸತೀಶ ರವರಿಗೆ ದುರುಪಯೋಗ ಆದ ಹಣದ ಬಗ್ಗೆ ಗೊತ್ತಾಗಲಿಲ್ಲ. ಸತೀಶ ರವರಿಗೆ ದಿಃ 04.10.2018 ರಂದು ಆ ರೀತಿ ದುರುಪಯೋಗ ಆದ ಬಗ್ಗೆ ಗೊತ್ತಾಯಿತು.

10. ನಮ್ಮ ಅಂಚೆ ಕಚೇರಿಯ ಲೆಕ್ಕ ಪುಸ್ತಕಗಳ ವಾರ್ಷಿಕ ತಪಾಸಣೆ ಮಾಡುತ್ತಾರೆ ಎಂದರೆ ಸರಿ. ಸದರಿ ತಪಾಸಣೆ ಕಾಲದಲ್ಲಿ ಲೋಪ ದೋಷಗಳು ಇದ್ದರೆ ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾರ್ಷಿಕ ತಪಾಸಣೆಯಲ್ಲಿ ಎಲ್ಲಾ ಲೆಕ್ಕ ಪುಸ್ತಕಗಳನ್ನು ತಪಾಸಿಸುವುದಿಲ್ಲ ಎಂದು ನುಡಿಯುತ್ತಾರೆ. ದಿಃ 01.07.2010 ರಿಂದ ದಿಃ 17.08.2018 ರವರೆಗೆ ಆರೋಪಿತನ ಕೆಲಸದಲ್ಲಿ ಯಾವುದೇ ಲೋಪ ದೋಷಗಳು ಇಲ್ಲ ಎಂದು ಆತನನ್ನು ಅಂಚೆ ಪಾಲಕನಿಂದ ಅಂಚೆ ಪೇದೆಯಾಗಿ ಮುಂಬಡ್ತಿ ನೀಡಿದ್ದು, ಸದರಿ ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಆತನು ಪರೀಕ್ಷೆಯಲ್ಲಿ ಉತ್ತೀರ್ಣನಾದ್ದರಿಂದ ಮುಂಬಡ್ತಿ ನೀಡಲಾಗಿದೆ, ಆದರೆ ಲೋಪ ದೋಷಗಳು ಇಲ್ಲ ಎಂದು ಮುಂಬಡ್ತಿ ನೀಡಲಾಗಿದೆ ಎಂದರೆ ಸರಿಯಲ್ಲ. ಪರೀಕ್ಷೆ ಪಾಸಾದರೂ ಸಹ ಲೋಪ ದೋಷ ಕಂಡು ಬಂದಲ್ಲಿ ಮುಂಬಡ್ತಿ ನೀಡುವುದಿಲ್ಲ ಎಂದರೆ ಸರಿ.

11. ನಾನು ಪೋಲೀಸರಿಗೆ ದೂರು ಸಲ್ಲಿಸುವ ಮುನ್ನ ಆರೋಪಿತ ತಾನು ತಪ್ಪು ಮಾಡಿದ್ದೇನೆ ಎಂದು ನನ್ನ ಮುಂದೆ ಹೇಳಿಕೆ ನೀಡಿದ್ದರು. ಆರೋಪಿತ ತನ್ನ ಹೇಳಿಕೆ

ನೀಡುವ ಸಮಯದಲ್ಲಿ ನಾನು ಮತ್ತು ಆರೋಪಿತ ಇಬ್ಬರೇ ಇದ್ದೆವು. ಆ ಸಮಯದಲ್ಲಿ ಇತರೇ ಅಂಚೆ ಕಚೇರಿಯ ಸಿಬ್ಬಂದಿಗಳು ಇದ್ದರು, ಆದರೆ ಅವರ ಸಹಿ ಪಡೆದಿಲ್ಲ.

12. ನಾನು ದೂರು ಸಲ್ಲಿಸಿದ ಮಾರನೇ ದಿನ ಪೋಲೀಸರು ಸ್ಥಳ ಪಂಚನಾಮೆ ಮಾಡಲು ಬಂದಿದ್ದರು. ಅದಕ್ಕೆ ಪಿ ಎಸ್ ಐ, ನಾನು, ಸಂದೇಶ ಸಿ ಮತ್ತು ರಮೇಶ ರವರು ಸಹಿ ಮಾಡಿದ್ದರು. ನಾನು ಹುಣಸೂರು ಉಪವಿಭಾಗಕ್ಕೆ ಅಂಚೆ ನೀರೀಕ್ಷನಾಗಿ ಸೇವೆ ಸಲ್ಲಿಸುವ ದಿನದಿಂದಲೂ ಆರೋಪಿತನ ಪರಿಚಯವಿದೆ. ಈ ಪ್ರಕರಣ ದಾಖಲಿಸಿಸುವ ಮುನ್ನವೇ ನನಗೆ ಆರೋಪಿತನ ಪರಿಚಯವಿದೆ. ನಾನು ಹಾಲಿ ಮಂಗಳೂರಿನ ಅಧೀನ ಸಹಾಯಕ ಅಧೀಕಕ್ಷರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನಾನು ಮಂಗಳೂರಿಗೆ ಹೋಗುವ ಮುನ್ನ ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ಸೇವೆ ಸಲ್ಲಿಸುತ್ತಿದ್ದೆ. ನನ್ನನ್ನು ಲೈಂಗಿಕ ಕಿರುಕುಳದ ಹಿನ್ನಲೆಯಲ್ಲಿ ಚನ್ನಪಟ್ಟಣದಿಂದ ಮಂಗಳೂರಿಗೆ ಶಿಕ್ಷಾತೀತ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಆರೋಪಿತ ನನ್ನ ವಿರುದ್ಧ ಆಕ್ಷೇಪಿಸಿ ನೊಂದ ಮಹಿಳೆಯ ಪರ ನಿಂತಿದ್ದರಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೊಂದ ಮಹಿಳೆಯಾದ ಶೋಭಾ ರವರು ಎಸ್ ಪಿ – ಶ್ರೀನಿವಾಸ ರೆಡ್ಡಿಯವರು ವಿರುದ್ಧ ಲೈಂಗಿಕ ಕಿರುಕುಳ ಆರೋಪಿ ಮಾಡಿದ್ದರು. ಈ ಸಂಬಂಧ ನಾನು ಆಕೆಯ ಪರ ಸಾಕ್ಷಿ ನುಡಿದಿದ್ದೇನೆ. ಈ ವಿಚಾರವಾಗಿ ನನ್ನ ವಿರುದ್ದವು ಆರೋಪ ಇತ್ತು ಎಂದರೆ ಸರಿಯಲ್ಲ, ಅದರೆ ನನ್ನ ಹೇಳಿಕೆಯನ್ನು ಎಸ್ ಪಿ ರವರ ವಿರುದ್ದ ಪಡೆದಿದ್ದರು ಎಂದು ನುಡಿಯುತ್ತಾರೆ .

13. ಹೊನ್ನಾಪುರ ಅಂಚೆ ಕಚೇರಿಯಲ್ಲಿ ಸಿಸಿ ಕ್ಯಾಮೇರಾ ಇಲ್ಲ. ಸ್ಥಳ ಮಹಜರು ಮಾಡಿದ ಸ್ಥಳದ ಚಕ್ಕುಬಂದಿ ಗೊತ್ತು. ಆರೋಪಿತ ಯಾವುದೇ ಖಾತೆಯ ಹಣ ದುರುಪಯೋಗ ಮಾಡಿಲ್ಲ, ದಾಖಲೆಗಳನ್ನು ಸೃಷ್ಟಿಸಿಲ್ಲ ಮತ್ತು ಹಳೇ ದ್ವೇಷಕ್ಕೆ ನಾನು ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸತೀಶ, ಶ್ರೀನಿವಾಸ, ಸರೋಜಮ್ಮ ರವರು ಲಿಖಿತ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತ ಸಹ ತಾನು ಮಾಡಿದ

ತಪ್ಪನ್ನು ಒಪ್ಪಿಕೊಂಡು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೆ ತೊಂದರೆ ನೀಡಲು ಸದರಿ ಹೇಳಿಕೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**